ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನೋಡೆಲ್ ಅಧಿಕಾರಿಗಳು/ಸಹಾಯಕ ಅಭಿಯಂತರರ ಕಛೇರಿ ನಾಗಪುರ ಉಪವಿಭಾಗ, ಬಿ.ಬಿ.ಎಂ.ಪಿ,

11ನೇ ಮುಖ್ಯರಸ್ತೆ, 11ನೇ ಕ್ರಾಸ್, ನಾಗಪುರ, ಬಿಬಿಎಂಪಿ ಕಛೇರಿ ಸಂಕೀರ್ಣ ಕಟ್ಟಡ, ಮಹಾಲಕ್ಷ್ಮಿಲೇಔಟ್ ಬೆಂಗಳೂರು-86,

# ದಿನಾಂಕ:-02-07-2022 ರಂದು ನಡೆದ ವಾರ್ಡ್ ಸಂಖ್ಯೆ:67ರ ವಾರ್ಡ್ ಸಮಿತಿ ಸಭೆಯ ನಡವಳಿ

ಉಲ್ಲೇಖ:- (1) ಸಮಿತಿ ಸಭೆ ಸೂಚಿ ಪತ್ರ ಸಂಖ್ಯೆ:ಬಿ12(5)/ಪಿಆರ್/35/2020-21 ದಿನಾಂಕ:21:09:2020

(2)ಸಭೆ ಸೂಚನಾ ಪತ್ರ ಸಂ. ಸ.ಅ./ವಾ-67/ಪಿಆರ್/45/2022-23 ದಿನಾಂಕ:30-06-2022

| ಕ್ರಸಂ. | ಶ್ರೀಯುತರ ಹೆಸರು | ಹುದ್ದೆ |
|---|---|---|
| 1. | ಶ್ರೀ. ಪಿ. ವಿಶ್ವನಾಥ್ | ಮುಖ್ಯ ಅಭಿಯಂತರರು (ದಾಸರಹಳ್ಳಿ ವಲಯ), ಬಿಬಿಎಂಪಿ, ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ67. |
| 2. | ಶ್ರೀ. ಬಿ. ಸಿ ರವಿಕುಮಾರ್ | ಸಹಾಯಕ ಅಭಿಯಂತರು ವಾರ್ಡ-67 ಹಾಗು ಸಮಿತಿ ಕಾರ್ಯದರ್ಶಿಗಳು. |
| 3. | ಶ್ರೀ. ಎಲ್ ತಿಮ್ಮರಾಜ್ | ಕಾರ್ಯಪಾಲಕ ಅಭಿಯಂತರರು,ಮಹಾಲಕ್ಷ್ಮೀಪುರಂ ವಿಭಾಗ |
| 4. | ಶ್ರೀ. ಉದಯ ಶಂಕರ್ | 1ನೇ 'ಆರ್' ಬ್ಲಾಕ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು. |
| 5. | ಶ್ರೀ. ಆಕಾಶ್ | ವಾರ್ಡ್ ಸಮಿತಿ ಸದಸ್ಯರು. |
| 6. | ಶ್ರೀ. ಕೆ ಗಂಗಹನುಮಯ್ಯ | ವಾರ್ಡ್ ಸಮಿತಿ ಸದಸ್ಯರು. |
| 7. | ಶ್ರೀ. ಸತೀಶ್ ರಾಮದಾಸ್ | ವಾರ್ಡ್ ನಾಗರೀಕರು. |
| 8. | ಶ್ರೀ.ರಂಗರಾಜು | ವಾರ್ಡ್ ನಾಗರೀಕರು. |
| 9. | ಶ್ರೀ. ಗಂಗಯ್ಯ | ಹಿರಿಯ ಆರೋಗ್ಯ ಪರೀವಿಕ್ಷಕರು, ವಾರ್ಡ್-67. |
| 10. | ಶ್ರೀ. ಮಂಜುನಾಥ್ | ತೋಟಗಾರಿಕೆ ಇಲಾಖೆ ಮೇಸ್ತ್ರಿ ಪಶ್ಚಿಮ ವಲಯ. |
| 11. | ಶ್ರೀ. ಗಿರೀಶ್. ಬಿ | ಬೆಂ.ಜ.ಮಂ ಜಲ ಪರೀವಿಕ್ಷಕರು ಎನ್ ಡಬ್ಲ್ಯೂ-1. |
| 12. | ಕುಮಾರಿ. ಪುಷ್ಪ | ಸಹಾಯಕ ಅಭಿಯಂತರರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ. |
| 13. | ಶ್ರೀ. ಮಂಜುನಾಥ್ | ಬೀದಿ ದೀಪ ನಿರ್ವಹಣೆ, ಗುತ್ತಿಗೆದಾರರು. |
| 14. | ಶ್ರೀ. ರಂಜಿತ್ ಕುಮಾರ್ | ವಾರ್ಡ್ ಮಾರ್ಷ್‌ಲ್ ವಾರ್ಡ್-67. |
| 15. | ಶ್ರೀ. ಸಂತೋಷ್ ರಾಜ್ | ಕಿರಿಯ ಆರೋಗ್ಯ ಪರೀವಿಕ್ಷಕರು. ವಾರ್ಡ್-67. |

ವಿಶ್ವನಾಥ್.ಪಿ



ಮು.ತಿ.ನೋ.

Scanned by CamScanner

| | | |
|---|---|---|
| 16. | ಶ್ರೀ. ಗೋವಿಂದಯ್ಯ | ಪೋಲೀಸ್ ಸಬ್‌ಇನ್ಸ್‌ಪೆಕ್ಟರ್, ರಾಜಾಜಿನಗರ ಸಂಚಾರಿ ಪೋಲೀಸ್ ಠಾಣೆ. |
| 17. | ಶ್ರೀ. ಮುನಿಸ್ವಾಮಯ್ಯ | ಸಹಾಯಕ ಪೋಲೀಸ್ ಇನ್ಸ್‌ಪೆಕ್ಟರ್, ಮಲ್ಲೇಶ್ವರಂ ಸಂಚಾರಿ ಪೋಲೀಸ್ ಠಾಣೆ. |
| 18. | ಶ್ರೀ. ಕೆ.ಜಿ ರವಿ | ಸಹಾಯಕ ಪೋಲೀಸ್ ಸಬ್ ಇನ್ಸ್‌ಪೆಕ್ಟರ್, ಮಹಾಲಕ್ಷ್ಮೀಲೇಔಟ್ ಪೋಲೀಸ್ ಠಾಣೆ. |
| 19. | ಶ್ರೀ. ರಾಜೇಶ್ | ಕಂದಾಯ ಪರೀವಿಕ್ಷಕರು. ವಾರ್ಡ್–67 |
| 20. | ಶ್ರೀ. ಆನಂದ್ ಮೂರ್ತಿ | ಬೆಸ್ಕಂ ಎನ್–1 ಉಪವಿಭಾಗ. |
| 21. | ಶ್ರೀ. ಕೆ.ವಿ ಲೋಕೇಶ್ | ಪಶು ಕೆಲಸ ವಿಭಾಗ |
| 22. | ಶ್ರೀ. ಮಲ್ಲಯ್ಯ | ಅರಣ್ಯ ಇಲಾಖೆ, ಮೇಸ್ತ್ರಿ ಪಶ್ಚಿಮ ವಲಯ |
| 23. | ಸುಬ್ರಮಣ್ಯನಗರ ಪೋಲೀಸ್ ಠಾಣೆ. | ಗೈರು ಹಾಜರಿ. |
| 24. | ಸಹಾಯಕ ಅಭಿಯಂತರರು, ಬೆಂ.ಜ.ಮಂ ಎಸ್.ಡಬ್ಲ್ಯೂ–2 | ಗೈರು ಹಾಜರಿ. |
| 25. | ಸಹಾಯಕ ಅಭಿಯಂತರರು, ಬೆಸ್ಕಂ ಎನ್–7 ಉಪವಿಭಾಗ | ಗೈರು ಹಾಜರಿ. |
| 26. | ಕಂದಾಯ ಪರೀವಿಕ್ಷಕರು, ವಾರ್ಡ್–67 | ಗೈರು ಹಾಜರಿ. |

ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿಗಳು ಮಾತನಾಡಿ ಜುಲೈ ಮಾಹೆಯ ದಿ: 02/07/2022 ರಂದು ಬೆಳಿಗ್ಗೆ 9.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಅಭಿವೃದ್ಧಿ ಹಾಗೂ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ಕರೆದಿರುವ ಸಭೆಗೆ ಆಗಮಿಸಿರುವ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮತ್ತು ಸಮಿತಿ ಸದಸ್ಯರಿಗೆ ಸ್ವಾಗತ ಕೋರಿದರು. ಹಾಗೂ ವಾರ್ಡ್ ಸಂಖ್ಯೆ:67ರ ವಾಸ್ತವದ ಬಗ್ಗೆ ಕಿರು ಪರಿಚಯವನ್ನು ಮಂಡಿಸಿದರು.

ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮಾತನಾಡಿ ಸಮಿತಿಯ ಸದಸ್ಯರು ಮತ್ತು ಸ್ಥಳೀಯ ಸಾರ್ವಜನಿಕರು ತಮ್ಮ ತಮ್ಮ ಅಹವಾಲುಗಳನ್ನು ತಿಳಿಸಬೇಕೆಂದು ತಿಳಿಸಿದ ಹಿನ್ನೆಲೆಯಲ್ಲಿ ಸಮಿತಿಯ ಸದಸ್ಯರು ಈ ಕೆಳಕಂಡಂತೆ ವಾರ್ಡ್‌ನಲ್ಲಿ ಕಂಡುಬಂದಿರುವ ಸಮಸ್ಯೆಗಳನ್ನು ಸಭೆಗೆ ಮಂಡಿಸಿದರು.

## ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:

| | |
|---|---|
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ಏಕ ಬಳಕೆ ಪ್ಲಾಸ್ಟಿಕ್ ನಿಷೇಧಿಸಿರುವ ಬಗ್ಗೆ ವಿವರಣೆ ನೀಡುವಂತೆ ಸಭೆಯಲ್ಲಿ ಹಾಜರಿದ್ದ ಹಿರಿಯ ಆರೋಗ್ಯ ಪರೀವಿಕ್ಷಕರಿಗೆ ತಿಳಿಸಲು ಸೂಚಿಸಿದರು. |
| ಶ್ರೀ. ಗಂಗಯ್ಯ<br>ಹಿರಿಯ ಆರೋಗ್ಯ ಪರೀವಿಕ್ಷಕರು,<br>ವಾರ್ಡ್–67 | ಏಕ ಬಳಕೆ ಪ್ಲಾಸ್ಟಿಕ್ ನಿಷೇಧಿಸಿರುವ ಬಗ್ಗೆ ಯಾವುದೇ ಆದೇಶ ಇದುವರೆಗು ನೀಡಿರುವುದಿಲ್ಲ ಎಂದು ಸಭೆಯಲ್ಲಿ ತಿಳಿಸಿದರು, ನೀಡಿದ ನಂತರ ಮುಂದಿನ ಕ್ರಮ ಜರುಗಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು. |
| ಶ್ರೀ. ರಂಗರಾಜು<br>ವಾರ್ಡ್ ನಾಗರೀಕರು. | ವಾರ್ಡ್‌ನ ರಾಜಾಜಿನಗರ 1ನೇ 'ಎನ್' ಬ್ಲಾಕ್‌ನಲ್ಲಿ ಹಲವರಿಗೆ ಬೂಸ್ಟರ್ ಡೋಸ್ ಲಸಿಕೆ ಅಗತ್ಯವಿದ್ದು, ಲಸಿಕೆ ನೀಡುವ ಸ್ಥಳದ ಬಗ್ಗೆ ಸಭೆಯಲ್ಲಿ ಮಾಹಿತಿ ಪಡೆದುಕೊಂಡರು. |

ಮು.ತಿ.ನೋ.



Scanned by CamScanner

| | |
|---|---|
| ಶ್ರೀ. ಗಂಗಯ್ಯ<br>ಹಿರಿಯ ಆರೋಗ್ಯ ಪರೀವಿಕ್ಷಕರು,<br>ವಾರ್ಡ್‌-67 | ವಾರ್ಡ್‌ನ ಗೆಳೆಯರ ಬಳಗ ವೃತ್ತದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಬೂಸ್ಟರ್ ಡೋಸ್ ಲಸಿಕೆಯನ್ನು ದಿನನಿತ್ಯ ನೀಡಲಾಗುತ್ತಿದೆ, 60 ವರ್ಷ ಮೇಲ್ಪಟ್ಟ ಎಲ್ಲಾ ಸಾರ್ವಜನಿಕರು ಬೂಸ್ಟರ್ ಡೋಸ್ ಲಸಿಕೆಯನ್ನು ಪಡೆಯುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ಘನತ್ಯಾಜ್ಯ ನಿರ್ವಹಣೆ ನಿಯಮ 2016ರ ಪ್ರಕಾರ ಕಸವನ್ನು ಮೂಲದಲ್ಲಿಯೇ ವಿಂಗಡಿಸಬೇಕು ಪ್ರತಿ ಮನೆಯಲ್ಲಿಯೂ 3 (ಹಸಿರು, ನೀಲಿ, ಕೆಂಪು) ರೀತಿಯ ಕಸದ ಬುಟ್ಟಿಗಳನ್ನು ಇಟ್ಟರಬೇಕು.<br>**ಹಸಿರು ಬುಟ್ಟಿಯಲ್ಲಿ:** ಸೊಪ್ಪು, ತರಕಾರಿ, ಹಣ್ಣುಗಳು ಮತ್ತು ಅಡುಗೆ ವೇಸ್ಟ್ (ಗೊಬ್ಬರ ಮಾಡಬಹುದಾದ ವಸ್ತುಗಳು)<br>**ನೀಲಿ ಬುಟ್ಟಿಯಲ್ಲಿ:** ಕಾಗದಗಳು, ಪ್ಲಾಸ್ಟಿಕ್‌ಗಳು, ಗಾಜುಗಳು, ಎಲೆಕ್ಟ್ರಾನಿಕ್ ವಸ್ತುಗಳು ಹಾಗು ಇತ್ಯಾದಿ. (ಮರುಬಳಕೆ ಮಾಡಬಹುದಾದ ವಸ್ತುಗಳು)<br>**ಕೆಂಪು ಬುಟ್ಟಿಯಲ್ಲಿ:** ಡೈಪರ್‌ಗಳು, ಬ್ಲೇಡುಗಳು,ಪ್ಯಾಡ್‌ಗಳು, ರಾಸಾಯನಿಕ ವಸ್ತುಗಳು,ಮತ್ತು ಇತ್ಯಾದಿ (ಅಪಾಯಕಾರಿ ತ್ಯಾಜ್ಯಗಳು )<br>ಕಸವನ್ನು ಎಲ್ಲೆಂದರಲ್ಲಿ ಬಿಸಾಡಬಾರದು, ಆಟೋಚಾಲಕರು ಮತ್ತು ಸಹಾಯಕರು ಮನೆ ಬಾಗಲಿಗೆ ಬಂದಾಗ ಕಸವನ್ನು ಬೇರ್ಪಡಿಸಿ ನೀಡಬೇಕು, ಪ್ಲಾಸ್ಟಿಕ್‌ನ್ನು ಪೂರ್ಣ ಪ್ರಮಾಣದಲ್ಲಿ ಬಳಸಬಾರದು. ಇದು ಆರೋಗ್ಯಕ್ಕೆ ಹಾನಿಕರಾಕ, ಹಸಿಕಸವನ್ನು ಮನೆಯ ಅಂಗಳದಲ್ಲಿಯೇ ಕಾಂಪೋಸ್ಟಿಂಗ್ ಮಾಡಿ ಗಿಡಗಳಿಗೆ ಹಾಕಬೇಕು ಎಂದು ಸಭೆಯಲ್ಲಿ ತಿಳಿಸಿದರು. |
| ಶ್ರೀ. ಉದಯಶಂಕರ್<br>1ನೇ 'ಆರ್'ಬ್ಲಾಕ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು. | ವಾರ್ಡ್‌ನ ರಾಜಾಜಿನಗರ 1ನೇ 'ಆರ್' ಬ್ಲಾಕ್‌ನ ಸಾರ್ವಜನಿಕರಿಗೆ ಏಕ ಬಳಕೆ ಪ್ಲಾಸ್ಟಿಕ್‌ಅನ್ನು ಬಳಸದಂತೆ ಹಾಗು ಘನತ್ಯಾಜ್ಯ ನಿರ್ವಹಣೆ ನಿಯಮ 2016ರ ಪ್ರಕಾರ ಕಸವನ್ನು ವಿಂಗಡಿಸುವ ಬಗ್ಗೆ ವಾಟ್ಸ್‌ಆಪ್ ಗುಂಪಿನಲ್ಲಿ ಸಂದೇಶ ರವಾನಿಸಲಾಗಿದೆ, ಎಚ್ಚು ಜನರು ನಿಯಮದಂತೆ ಪಾಲಿಸಲು ಅವರ ಅಭಿಪ್ರಾಯ ತಿಳಿಸಿದ್ದಾರೆ. |
| ಶ್ರೀ. ರಂಗರಾಜು<br>ವಾರ್ಡ್ ನಾಗರೀಕರು. | ವಾರ್ಡ್‌ನ ರಾಜಾಜಿನಗರ 1ನೇ 'ಎನ್' ಬ್ಲಾಕ್‌ನಲ್ಲಿ ಮರಗಳ ರೆಂಬೆಗಳ ಟ್ರೀಮಿಂಗ್ ಅವಶ್ಯವಿದ್ದು ಅರಣ್ಯ ಇಲಾಖೆಯವರು ಮರಗಳ ರೆಂಬೆಗಳ ಟ್ರೀಮಿಂಗ್ ಮಾಡಬೇಕಾಗಿ ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ.ಆಕಾಶ್<br>ವಾರ್ಡ್ ಸಮಿತಿ ಸದಸ್ಯರು. | ವಾರ್ಡ್‌ನ ರಾಜಾಜಿನಗರ 'ಕೆ' ಬ್ಲಾಕ್‌ನ ನಳಪಾಕ ಹೋಟೆಲ್ ರಸ್ತೆಯಲ್ಲಿ ಮರಗಳ ರೆಂಬೆಗಳ ಟ್ರೀಮಿಂಗ್ ಮಾಡಬೇಕು ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ಮಲ್ಲಯ್ಯ<br>ಅರಣ್ಯ ಇಲಾಖೆ, ಮೇಸ್ತ್ರಿ ಪಶ್ಚಿಮ ವಲಯ | ವಾರ್ಡ್‌ನ ನಾಗರೀಕರು ಹಾಗು ವಾರ್ಡ್ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ಮರಗಳ ರೆಂಬೆಗಳ ಟ್ರೀಮಿಂಗ್ ಮಾಡಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ರಂಗರಾಜು<br>ವಾರ್ಡ್ ನಾಗರೀಕರು. | ವಾರ್ಡ್‌ನ 1ನೇ ಎನ್ ಬ್ಲಾಕ್‌ನ ಗಣೇಶ ದೇವಾಲಯದ ಹಿಂಭಾಗದ ಮಕ್ಕಳ ಆಟದ ಮೈದಾನದಲ್ಲಿ ಕುರ್ಚಿಗಳನ್ನು ಹಾಕಿರುವುದು ಹಾಗು ಆಟದ ಮೈದಾನದಲ್ಲಿ ವಾಕಿಂಗ್ ಟ್ರ್ಯಾಕ್ ಅಭಿವೃಧಿ ಪಡಿಸಿರುವ ಬಗ್ಗೆ ಸಭೆಯಲ್ಲಿ ಮೆಚ್ಚುಗೆ ವ್ಯಕ್ತ ಪಡಿಸಿದರು. |
| ಶ್ರೀ. ಗಂಗಹನುಮಯ್ಯ<br>ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ ಅಯ್ಯಪ್ಪ ದೇವಸ್ಥಾನದ ಹತ್ತಿರ ನೋ ಎಂಟ್ರಿ ಬೋರ್ಡ್ ಅಳವಡಿಸಬೇಕಾಗಿ ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರು<br>ವಾರ್ಡ್-67 | ವಾರ್ಡ್‌ನ 1ನೇ ಮೈನ್ ನಾಗಪುರದಲ್ಲಿ ಬೆಂಗಳೂರು ಜಲಮಂಡಳಿರವರು ರಸ್ತೆ ಅಗೆದು ದುರಸ್ಥಿ ಮಾಡದೇ ಹಾಗೆಯೆ ಬಿಟ್ಟಿರುತ್ತಾರೆ ಕೂಡಲೇ ಸರಿಪಡಿಸಬೇಕು ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |



ಮು.ತಿ.ನೋ.

Scanned by CamScanner

| | |
|---|---|
| ಶ್ರೀ. ಗಿರೀಶ್. ಬಿ<br>ಬೆಂ.ಜ.ಮಂ ಜಲ ಪರೀವೀಕ್ಷಕರು<br>ಎನ್ ಡಬ್ಲ್ಯೂ–1. | ವಾರ್ಡ್‌ನ ಸಹಾಯಕ ಅಭಿಯಂತರರ ದೂರಿಗೆ ಸಂಭಂದಿಸಿದಂತೆ 1ನೇ ಮೈನ್‌ನಲ್ಲಿ ವೆಟ್ ಮಿಕ್ಸ್ ಹಾಕಿ ರಸ್ತೆ ಗುಂಡಿಯನ್ನು ದುರಸ್ಥಿಗೊಳಿಸಲಾಗುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ಗೋವಿಂದಯ್ಯ<br>ಪೋಲಿಸ್ ಸಬ್‌ಇನ್ಸ್‌ಪೆಕ್ಟರ್,<br>ರಾಜಾಜಿನಗರ ಸಂಚಾರಿ ಪೋಲಿಸ್<br>ಠಾಣೆ. | ವಾರ್ಡ್‌ನ ಶಂಕರಮಠ ರಸ್ತೆಯ ಪೈಪ್ ಲೈನ್‌ರಸ್ತೆಯಿಂದ ಗೆಳೆಯರ ಬಳಗ ವೃತ್ತದವರೆಗು ಹಲವು ಬೀದಿ ದೀಪಗಳು ಉರಿಯುತ್ತಿರುವುದಿಲ್ಲ ವಾಹನ ಸವಾರರಿಗೆ ತೊಂದರೆಯಾಗುತ್ತಿದೆ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ಉದಯಶಂಕರ್<br>1ನೇ 'ಆರ್'ಬ್ಲಾಕ್ ಕ್ಷೇಮಾಭಿವೃದ್ಧಿ<br>ಸಂಘದ ಅಧ್ಯಕ್ಷರು. | ವಾರ್ಡ್‌ನ '1'ನೇ ಆರ್ ಬ್ಲಾಕ್ ರಾಜಾಜಿನಗರದಲ್ಲಿ ಬೀದಿ ದೀಪ ಉರಿಯುತ್ತಿರುವುದಿಲ್ಲ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು. | ವಾರ್ಡ್‌ನ ರಾಜಾಜಿನಗರ ಸಂಚಾರಿ ಪೋಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಹಾಗು 1ನೇ 'ಆರ್'ಬ್ಲಾಕ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರ ದೂರಿಗೆ ಸಂಭಂದಿಸಿದಂತೆ ಸಭೆಯಲ್ಲಿ ಹಾಜರಿದ್ದ ಬೀದಿ ದೀಪ ನಿರ್ವಹಣೆ ಗುತ್ತಿಗೆದಾರರಿಗೆ ಕೂಡಲೇ ದುರಸ್ಥಿಯಾಗಿರುವ ಬೀದಿ ದೀಪಗಳನ್ನು ಸರಿಪಡಿಸಿ 3 ದಿನಗಳೊಳಗೆ ವರದಿ ನೀಡಲು ತಿಳಿಸಿದರು. |
| ಶ್ರೀ. ರಂಗರಾಜು<br>ವಾರ್ಡ್ ನಾಗರೀಕರು. | ವಾರ್ಡ್‌ನ ರಾಜಾಜಿನಗರ '1'ನೇ ಎನ್ ಬ್ಲಾಕ್‌ನ ಗಣೇಶ ದೇವಾಲಯದ ಹಿಂಭಾಗದ ಮಕ್ಕಳ ಆಟದ ಮೈದಾನದಲ್ಲಿ ಲೈಟ್ ಇರುವುದಿಲ್ಲ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು. | ವಾರ್ಡ್‌ನ ನಾಗರೀಕರ ದೂರಿಗೆ ಸಂಭಂದಿಸಿದಂತೆ ಸಹಾಯಕ ಅಭಿಯಂತರರು (ಬೀದಿ ದೀಪ ನಿರ್ವಹಣೆ) ರವರು ಕ್ರಮವಹಿಸಲು ಸಭೆಯಲ್ಲಿ ತಿಳಿಸಿದರು. |
| ಶ್ರೀ. ಮಂಜುನಾಥ್<br>ಬೀದಿ ದೀಪ ನಿರ್ವಹಣೆ,<br>ಗುತ್ತಿಗೆದಾರರು. | ವಾರ್ಡ್‌ನಲ್ಲಿ ಹಲವಾರು ಕಡೆ ಚಾಲ್ತಿಯಿರುವ ಬೀದಿ ದೀಪಗಳ ವಿದ್ಯುತ್ ತಂತಿಯನ್ನು ಹಲವಾರು ಕಡೆ ಕಡಿತಗೊಳಿಸಿರುತ್ತಾರೆ, ಇದರಿಂದ ನಿರ್ವಹಣೆ ಮಾಡುತ್ತಿರುವ ಗುತ್ತಿಗೆದಾರರು ಸರಿಯಾಗಿ ಬೀದಿ ದೀಪಗಳನ್ನು ನಿರ್ವಹಿಸಲು ಸಧ್ಯವಾಗುತ್ತಿರುವುದಿಲ್ಲ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರು<br>ವಾರ್ಡ–67 | ವಾರ್ಡ್‌ನ ಬೀದಿ ದೀಪ ನಿರ್ವಹಣೆ, ಗುತ್ತಿಗೆದಾರರ ದೂರಿಗೆ ಸಂಭಂದಿಸಿದಂತೆ ಸಭೆಯಲ್ಲಿ ಹಾಜರಿದ್ದ ಮಹಾಲಕ್ಷ್ಮೀಲೇಔಟ್ ಪೋಲೀಸ್ ಠಾಣೆಯವರಿಗೆ ಬೀದಿ ದೀಪಗಳ ವಿದ್ಯುತ್ ತಂತಿಯನ್ನು ಕಡಿತಗೊಳಿಸುತ್ತಿರುವ ವಿರುದ್ದ ಕ್ರಮತೆಗೆದುಕೊಳ್ಳಬೇಕು ಹಾಗು ಸದರಿ ಬೀದಿ ದೀಪಗಳ ವಿದ್ಯುತ್ ತಂತಿಯನ್ನು ಕಡಿತಗೊಳಿಸುತ್ತಿರುವವರನ್ನು ಸಿಸಿ ಕ್ಯಾಮೇರದಲ್ಲಿ ಸೆರೆಯಾಗಿರುವುದು ಕಂಡುಬಂದಲ್ಲಿ ಪೋಲೀಸ್ ಠಾಣೆಗೆ ದೂರು ನೀಡಲು ಬೀದಿ ದೀಪ ನಿರ್ವಹಣೆ, ಗುತ್ತಿಗೆದಾರರಿಗೆ ತಿಳಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್<br>ಸಹಾಯಕ ಅಭಿಯಂತರು<br>ವಾರ್ಡ–67 | ವಾರ್ಡ್‌ನಲ್ಲಿ ಸಾರ್ವಜನಿಕರು ಮನೆಯ ಡೆಬ್ರೀಸ್‌ಅನ್ನು ರಸ್ತೆಯ ಮೇಲೆ ಹಾಕಿ ತೆರವುಗೊಳಿಸುತ್ತಿರುವುದಿಲ್ಲ, ಮಳೆಗಾಲ ಶುರುವಾಗುತ್ತಿರುವುದರಿಂದ ಡೆಬ್ರೀಸ್ ರಸ್ತೆಯ ಪಕ್ಕದಲ್ಲಿರುವ ಚರಂಡಿಗೆ ಹೋಗಿ ಸದರಿ ಚರಂಡಿ ಬ್ಲಾಕ್ ಆಗುವ ಸಧ್ಯತೆಯಿರುತ್ತದೆ ಇದರಿಂದ ಸಾರ್ವಜನಿಕರು ಡೆಬ್ರೀಸ್ ಹಾಕಿ ತೆರವುಗೊಳಿಸದ ಮನೆಯ ಮಾಲೀಕರಿಗೆ ಮಾರ್ಷಲ್ ದಂಡ ಹಾಕಲು ಸಭೆಯಲ್ಲಿ ಸೂಚಿಸಿದರು. |
| ಶ್ರೀ. ರಂಜಿತ್ ಕುಮಾರ್<br>ವಾರ್ಡ್ ಮಾರ್ಷ್‌ಲ್ ವಾರ್ಡ್–<br>67. | ವಾರ್ಡ್‌ನ ಸಹಾಯಕ ಅಭಿಯಂತರು ಸೂಚಿಸಿರುವಂತೆ ಮನೆಯ ಮಾಲೀಕರಿಗೆ ದಂಡ ಹಾಕುವುದಾಗಿ ಸಭೆಯಲ್ಲಿ ತಿಳಿಸಿದರು. |
| ಶ್ರೀ. ಗಂಗಹನುಮಯ್ಯ<br>ವಾರ್ಡ್ ಸಮಿತಿ ಸದಸ್ಯರು | ವಾರ್ಡ್‌ನ ಬಿ.ಜಿ.ಎಸ್ ಶಾಲೆ ಎದುರು ಪೈಪ್ ಲೈನ್ ರಸ್ತೆಯಲ್ಲಿ ಅಭಾಂಡೆಡ್ ವಾಹನಗಳು ನಿಂತಿರುತ್ತವೆ ಇದರಿಂದ ವಾಹನ ಸವಾರರಿಗೆ ತೊಂದರೆಯಾಗುತ್ತಿದೆ ಎಂದು ಸಭೆಯಲ್ಲಿ ಪ್ರಸ್ಥಾಪಿಸಿದರು. |



ಪು.ತಿ.ನೋ.

Scanned by CamScanner

| | |
|---|---|
| ಶ್ರೀ. ಸತೀಶ್ ರಾಮದಾಸ್ ವಾರ್ಡ್‌ನ ನಾಗರೀಕರು. | ವಾರ್ಡ್‌ನ ಪ್ರಗತಿ ನರ್ಸಿಂಗ್ ಹೋಮ್ ಎದುರು 5ನೇ ಮುಖ್ಯರಸ್ತೆಯಲ್ಲಿ ಅಬಾಂಡೆಡ್ ವಾಹನಗಳು ನಿಂತಿರುತ್ತವೆ ಇದರಿಂದ ವಾಹನ ಸವಾರರಿಗೆ ತೊಂದರೆಯಾಗುತ್ತಿದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ. ವಿಶ್ವನಾಥ್ ನೋಡೆಲ್ ಅಧಿಕಾರಿಗಳು. | ವಾರ್ಡ್‌ನ ವಾರ್ಡ್‌ನ ನಾಗರೀಕರು ಹಾಗು ವಾರ್ಡ್ ಸಮಿತಿ ಸದಸ್ಯರ ದೂರಿಗೆ ಸಂಬಂಧಿಸಿದಂತೆ ರಾಜಾಜಿನಗರ ಸಂಚಾರಿ ಪೊಲೀಸ್ ಠಾಣೆಯವರು ಕ್ರಮವಹಿಸುವಂತೆ ತಿಳಿಸಿದರು. |
| ಶ್ರೀ. ಸತೀಶ್ ರಾಮದಾಸ್ ವಾರ್ಡ್‌ನ ನಾಗರೀಕರು. | ವಾರ್ಡ್‌ನ ರಾಜಾಜಿನಗರ ಮೆಟ್ರೊ ನಿಲ್ದಾಣದ ಕೆಳಗೆ ಪಶ್ಚಿಮ ಕಾರ್ಡ್ ರಸ್ತೆಯಲ್ಲಿ ಪಾದಚಾರಿಗಳು ರಸ್ತೆ ದಾಟಲು ಬಹಳ ಸಮಸ್ಯೆಯಾಗುತ್ತಿರುತ್ತದೆ ಇದರಿಂದ ರಸ್ತೆ ಹಂಪ್ಸ್ ಅನ್ನು ಪಾದಚಾರಿಗಳು ರಸ್ತೆ ದಾಟುವಂತೆ ತಾಂತ್ರಿಕ ರೀತಿಯಲ್ಲಿ ಅಳವಡಿಸಲು ಸಭೆಯಲ್ಲಿ ತಿಳಿಸಿದರು. |
| ಶ್ರೀ. ವಿಶ್ವನಾಥ್ ನೋಡೆಲ್ ಅಧಿಕಾರಿಗಳು. | ವಾರ್ಡ್‌ನ ನಾಗರೀಕರು ತಿಳಿಸಿರುವಂತೆ ರಾಜಾಜಿನಗರ ಮೆಟ್ರೊ ನಿಲ್ದಾಣದ ಕೆಳಗೆ ಪಶ್ಚಿಮ ಕಾರ್ಡ್ ರಸ್ತೆಯಲ್ಲಿ ಪಾದಚಾರಿಗಳು ರಸ್ತೆ ದಾಟಲು ಬಹಳ ಸಮಸ್ಯೆಯಾಗುತ್ತಿರುವುದು ಕಂಡುಬಂದಿರುತ್ತದೆ, ಆದ್ದರಿಂದ ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯರವರು ಸ್ಥಳ ಪರಿಶೀಲಿಸಿ ಸುಲಭವಾಗಿ ರಸ್ತೆ ದಾಟಲು ತಾಂತ್ರಿಕ ರೀತಿಯಲ್ಲಿ ಸಮಸ್ಯೆ ಬಗೆಹರಿಸಲು ಸಭೆಯಲ್ಲಿ ತಿಳಿಸಿದರು. |
| ಶ್ರೀ. ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನಲ್ಲಿ ಕಪ್ಪು ಚುಕ್ಕಿ ಪ್ರದೇಶಗಳನ್ನು ಕಣ್ಣಿಗಾವಲು ಮಾಡಿ ಕಸ ಹಾಕುವವರಿಗೆ ದಂಡ ವಿಧಿಸಲು ಹಾಗು ಸಾರ್ವಜನಿಕರಿಗೆ ಅರಿವು ಮೂಡಿಸಲು ನಿರ್ದೇಶಿಸಲಾಯಿತು ಮುಂದುವರಿಯುತ ಹಸಿ ಹಾಗು ಒಣ ತ್ಯಾಜ್ಯ ಸಂಗ್ರಹಕಾರರು ಮನೆ ಮನೆಯಿಂದ ಸಂಗ್ರಹಿಸುವ ಹಸಿ ತ್ಯಾಜ್ಯವನ್ನು ಅವರ ವತಿಯಿಂದಲೇ ಸಂಸ್ಕರಿಸಿ ನಿರ್ವಹಿಸಲು ಸೂಚಿಸುವುದು ಒಂದು ವೇಳೆ ಅನುಪಯುಕ್ತ ಒಣ ತ್ಯಾಜ್ಯವನ್ನು ರಸ್ತೆಗೆ ಬಿಸಾಡಿದಲ್ಲಿ ಅವರಿಗೆ ದಂಡ ವಿಧಿಸಲು ಸೂಚಿಸಲಾಯಿತು. ಮಾರ್ಷಲ್ ಇಬ್ಬರ ಸಮುಖದಲ್ಲಿ ಇನ್ನು ಹೆಚ್ಚು ನಿಷೇದಿತ ಏಕ ಬಳಕೆ ಪ್ಲಾಸ್ಟಿಕ್ ಬಳಕೆದಾರರ ಅಂಗಡಿಗಳನ್ನು ರೈಡ್ ಮಾಡಿ ದಂಡ ಹಾಕಲು ಸೂಚಿಸಿದರು. |
| ಶ್ರೀ. ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಸಹಾಯಕ ಅಭಿಯಂತರರು ರಸ್ತೆ ಗುಂಡಿ ಬಿದ್ದಲ್ಲಿ 3 ದಿನಗಳೊಳಗೆ ರಸ್ತೆ ಗುಂಡಿಯನ್ನು ಮುಚ್ಚಿ ಕ್ರಮವಹಿಸಲು ಸಭೆಯಲ್ಲಿ ಸೂಚಿಸಿದರು. |
| ಶ್ರೀ. ಬಿ. ಸಿ ರವಿಕುಮಾರ್ ಸಹಾಯಕ ಅಭಿಯಂತರು ವಾರ್ಡ್–67 | ವಾರ್ಡ್‌ನ ನೋಡೆಲ್ ಅಧಿಕಾರಿಗಳು ಸೂಚಿಸಿರುವಂತೆ ರಸ್ತೆ ಗುಂಡಿ ಬಿದ್ದಲ್ಲಿ ಆದಷ್ಟು ಬೇಗ ರಸ್ತೆ ಗುಂಡಿಯನ್ನು ಮುಚ್ಚಲಾಗುವುದಾಗಿ ಸಭೆಗೆ ಭರವಸೆ ನೀಡಿದರು. |

ವಾರ್ಡ್ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಭಾನಡವಳಿಗಳಿಗೆ ಅನುಸಾರವಾಗಿ ತಮ್ಮ ಇಲಾಖೆಗೆ ಸಂಬಂಧಿಸಿದ ದೂರುಗಳನ್ನು ಪಟ್ಟಿ ಮಾಡಿಕೊಂಡು ಸದರಿ ದೂರುಗಳನ್ನು ಸರಿಪಡಿಸಿರುವ ಬಗ್ಗೆ ಅಥವಾ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ದೃಢೀಕೃತ ಮಾಹಿತಿಗಳನ್ನು ತಪ್ಪದೇ ವಾರ್ಡ್ ಕಮಿಟಿ ವಾರ್ಡ್–67 ವಾಟ್ಸ್ ಆಪ್ ಗ್ರೂಪ್ ನಲ್ಲಿ ಮತ್ತು ಪ್ರತಿ ವಾರ್ಡ್ ಸಮಿತಿ ಸಭೆಯಲ್ಲಿ ವರದಿ ಮಾಡಲು ಸೂಚಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು. ಸಭೆಯ ಕೊನೆಯಲ್ಲಿ ಸಮಿತಿ ಕಾರ್ಯದರ್ಶಿ ರವರು ಸಮಿತಿ ಸಭೆಗೆ ಆಗಮಿಸಿರುವ ಎಲ್ಲರಿಗೂ ವಂದಿಸಿದರು.

**ಪ್ರತಿಯನ್ನು**

1. ಮಾನ್ಯ ವಲಯ ಉಪಆಯುಕ್ತರು (ಆಡಳಿತ), ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
3. ಮಾನ್ಯ ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ಆರೋಗ್ಯ ಅಧಿಕಾರಿಗಳು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
5. ಮಾನ್ಯ ಅಧೀಕ್ಷಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ಕೇಂದ್ರ ರವರ ಅವಗಾಹನ ಸಲ್ಲಿಸಿದೆ.



ಮು.ತಿ.ನೋ.

Scanned by CamScanner

6. ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
7. ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರ ಅವಗಾಹನೆಗೆ ತರಲು ಹಾಗೂ ಅಗತ್ಯ ಕ್ರಮಕ್ಕಾಗಿ ಸಹಾಯಕರಿಗೆ ಸಲ್ಲಿಸಿದೆ.
8. ಆರೋಗ್ಯ ಅಧಿಕಾರಿಗಳು, (ಪಶ್ಚಿಮ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
10. ಕಂದಾಯ ಅಧಿಕಾರಿಗಳು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮವಹಿಸಲು ಸಲ್ಲಿಸಿದೆ.
12. ಸಹಾಯಕ ಕಂದಾಯ ಅಧಿಕಾರಿಗಳು ನಾಗಪುರ ಉಪವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ ವಿಭಾಗ) ನಾಗಪುರ ಉಪವಿಭಾಗ ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
14. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ಪಶ್ಚಿಮ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
15. ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
16. ಕಛೇರಿಯ ಕಡತಕ್ಕೆ.

ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು, ವಾರ್ಡ್– 67
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು ಹಾಗೂ
ನೋಡಲ್ ಅಧಿಕಾರಿಗಳು ವಾರ್ಡ್– 67
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned by CamScanner